ಅವಳು ಆಗಲೂ ನಕ್ಕಳು. ಕೆಳಗೆ ಕೊಟ್ಟಿಗೆಯಿಂದಲೋ ಎಲ್ಲಿಂದಲೋ ಹಸುಗಳು ಅತ್ತವು. ಗೂಬೆಗಳು ಮರಗಳಿಂದ ಹೂಂಗುಟ್ಟಿದವು. ತನ್ನ ಕೈಕಾಲುಗಳು ರೋಮಾಂಚನಗೊಳ್ಳುತ್ತಿವೆಯೆಂದು ತೋರಿತು. ಅವನು ಅವಳನ್ನು ತಬ್ಬಿ ಹಿಡಿದುಕೊಂಡು ಹೇಳಿದ,

'ನಿನ್ನ ಬಣ್ಣ ಬಂಗಾರದ್ದು. ಇದು ಹೇಗಾಯಿತು?'

ಆಗಲೂ ಅವಳು ನಕ್ಕಳು.

ರಜಾದಿನಗಳು ಮುಗಿಯುತ್ತಾ ಬಂದವು. ಹೋಗುವುದರ ಹಿಂದಿನ ರಾತ್ರಿ, ಮಧ್ಯರಾತ್ರಿ ಕಳೆದು ಒಂದೆರಡು ನಿಮಿಷಗಳ ನಂತರ ಆತ ತಟ್ಟನೆ ಎಚ್ಚರಗೊಂಡು ಎದ್ದು ಕುಳಿತ. ತಾನು ನಾಳೆ ರಾತ್ರಿ ಅವಳನ್ನು ಕಾಣಲಾರೆನೆಂದು ಜ್ಞಾಪಿಸಿಕೊಂಡಾಗ ಅವನಿಗೆ ತೀವ್ರ ವ್ಯಸನವುಂಟಾಯಿತು. ಅವನು ಮೇಣದ ಬತ್ತಿಯನ್ನು ಹಚ್ಚಿ ಮೇಜನ್ನು ಮಂಚದ ಬಳಿಗೆ ಸರಿಸಿದ. ಅನಂತರ ಬಂಗಾರದ ಬಣ್ಣದ ಆಕೆಯನ್ನು ಕರೆಯತೊಡಗಿದ.

'ಸುವರ್ಣಾ, ಏಳು. ಎದ್ದು ಕುಳಿತುಕೋ. ನಾವು ಬೆಳಗಿನತನಕ ಮಾತನಾಡೋಣ.' ಅವಳು ಎಚ್ಚರಗೊಳ್ಳದೆ ನಿದ್ರಿಸುತ್ತಲೇ ಇದ್ದಳು. ಅವನು ಅವಳ ಗುಂಗುರು ಕೂದಲುಗಳನ್ನು ಓರಣಗೊಳಿಸಿದ. ಅವಳ ತುಟಿಗಳನ್ನು ಮೆದುವಾಗಿ ಸ್ಪರ್ಶಿಸಿದ. ಆದರೂ ಅವಳು ಎಚ್ಚರಗೊಳ್ಳಲಿಲ್ಲ. ಕೊನೆಗೆ ಅವನು ತನ್ನ ರೇಷ್ಮೆ ಟವಲಿನಿಂದ ಪನ್ನೀರು ಬೆರೆಸಿದ ನೀರನಲ್ಲಿ ಅದ್ದಿ ಅವಳ ಮುಖವನ್ನು ಒರೆಸಿದ. ಹಾಗೆಯೇ ಅವನು ಕೈಯನ್ನು ಹಿಂದಕ್ಕೆಳೆದ. ಆ ದೃಶ್ಯ ಕಂಡು ಅವನು ಬೆಚ್ಚಿದ. ಅವಳ ಮುಖ ಶೂನ್ಯವಾಗಿತ್ತು. ಕಣ್ಣುಗಳಿಲ್ಲ, ಮೂಗಿಲ್ಲ... ಏನೂ ಇಲ್ಲ. ಕೇವಲ ಬಾಯಿ ಮಾತ್ರ. ಟವಲಿನ ಮೇಲೆ ಬಂಗಾರದ ಬಣ್ಣ ಅಂಟಿಕೊಂಡಿತ್ತು. ಅವನು ಟವಲನ್ನು ನೆಲಕ್ಕೆಸೆದು, ಗಾಬರಿಯಿಂದ ಕೋಣೆಯಿಂದ ಹೊರಕ್ಕೆ ಓಡಿದ. ಏಣಿಮೆಟ್ಟಿಲುಗಳನ್ನು ಇಳಿಯಲು ತೊಡಗಿದಾಗ, ಮಂಚಿನ ಮೇಲೆ ಮಲಗಿದ್ದ ಆ ರೂಪ ಎದ್ದು ಅವನನ್ನು ಹಿಂಬಾಲಿಸಿತು.

'ಹೋಗದಿರಿ, ದಯವಿಟ್ಟು ಹೋಗಬೇಡಿ' ಅವಳು ದಯನೀಯವಾಗಿ ಕೇಳಿಕೊಂಡಳು. ಅವನು ತಿರುಗಿ ನೋಡಿದ. ಮೆಟ್ಟಿಲಿನ ಮೇಲೆ ಅಸ್ತವ್ಯಸ್ತವಾದ ಉಡುಪುಗಳಲ್ಲಿ ಅವಳು ನಿಂತಿದ್ದಾಳೆ. ಆದರೆ ಮುಖವಿರಲಿಲ್ಲ...

'ಅಯ್ಯೋ!...' ಅವನು ಕೂಗಿದ. 'ನೀನು ಮನುಷ್ಯಳಲ್ಲ...' ಎನ್ನುತ್ತ ಆತ ಯಾವ ಪರಿವೆಯೂ ಇಲ್ಲದೆ ಕತ್ತಲೆಯಲ್ಲಿ ಓಡತೊಡಗಿದ. ಕೆಳಗಿನ ನಡುಹಾದಿಯಲ್ಲಿ ಸ್ವಲ್ಪವೂ ಬೆಳಕಿರಲಿಲ್ಲ. ಕಪ್ಪು ನಾಯಿಗಳು ಅಲ್ಲಿ ಸಾಲಾಗಿ ನಿಂತಿವೆಯೆಂದೂ ಅವುಗಳ ಹಳದಿ ಕಣ್ಣುಗಳು ತನ್ನ ಮುಖವನ್ನೇ ದಿಟ್ಟಿಸುತ್ತಿವೆಯೆಂದು ಅವನಿಗೆ ಅನಿಸಿತು.

ಅವನು ಬಾಗಿಲನ್ನು ಹೇಗೋ ಪತ್ತೆ ಹಚ್ಚಿ ತೆರೆದು ಅಂಗಳಕ್ಕಿಳಿದ.

'ನನ್ನನ್ನು ಬಿಟ್ಟು ಹೋಗದಿರಿ...' ಆ ಹೆಣ್ಣು ಧ್ವನಿ ಅವನನ್ನು ಹಿಂಬಾಲಿಸಿತು.

'ನಾನು ಪ್ರೇತ... ನಿಜ. ಆದರೆ ನಾನು ನಿನ್ನನ್ನು ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದೇನೆ...' ಅವಳು ಹೇಳಿದಳು. ಅವನು ತಿರುಗಿ ನೋಡದೆ, ಗೇಟನ್ನು ತೆರೆದು, ಹೊರಗಿನ ರಸ್ತೆಗಿಳಿದು ತನ್ನ ಮನೆಯತ್ತ ಓಡತೊಡಗಿದ. ಆಗಲೂ ಮುಖವಿಲ್ಲದ ಆಕೆ ಗೇಟಿನ ಬಳಿ ಬಂದು ನಿಂತು ಅವನಿಗೆ ನಸುಕಿನ ಗಾಳಿಯಂತೆ ಮೆದುಧ್ವನಿಯಲ್ಲಿ ಬೇಡುತ್ತಿದ್ದಳು.

'ನನ್ನನ್ನು ಕ್ಷಮಿಸಿ... ನಾನು ನಿನ್ನನ್ನು ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿದೆ... ಕ್ಷಮೆ ಇರಲಿ ಕ್ಷಮೆ ಇರಲಿ.'